# ದಹಾಣೂ ಮಹಾಲಕ್ಷ್ಮಿ

## ಬುಡಕಟ್ಟು ಜನರು ಪೂಜಿಸುವ ಎಲ್ಲರ ಮೆಚ್ಚಿನ ದೇವಿ



**ಮಹಾರಾಷ್ಟ್ರದ ದಹಾಣೂವಿನ ಮಹಾಲಕ್ಷ್ಮಿ ಮಂದಿರ ದೇಶದ ಪ್ರಸಿದ್ಧ ಲಕ್ಷ್ಮಿ ದೇವಾಲಯಗಳಲ್ಲೊಂದು. ಇಲ್ಲಿನ ದೇವಿಗೆ ಬುಡಕಟ್ಟು ಸಮುದಾಯದವರೇ ಅರ್ಚಕರು.**

■ **ಶ್ರೀನಿವಾಸ ಜೋಕಟ್ಟೆ**

ಮಹಾರಾಷ್ಟ್ರದ ಮುಂಬಯಿಯ ಉತ್ತರಕ್ಕೆ 123 ಕಿ.ಮೀ. ದೂರದ ಪಾಲ್ಘರ್ ಜಿಲ್ಲೆಯ ದಹಾಣೂ 'ಮಹಾಲಕ್ಷ್ಮೀ ದೇವಸ್ಥಾನ'ದಿಂದಾಗಿ ಪ್ರಸಿದ್ಧವಾದುದು. ಈ ದೇಗುಲಕ್ಕೆ ಹಿಂದಿನಿಂದಲೂ ಬುಡಕಟ್ಟು ಜನಾಂಗದವರೇ ಅರ್ಚಕರು. ಮಹಾರಾಷ್ಟ್ರ ಮತ್ತು ಗುಜರಾತ್‌ನ ಎಲ್ಲ ವರ್ಗದ ಭಕ್ತರು ದೇಗುಲದಲ್ಲಿ ವರ್ಷವಿಡೀ ಕಿಕ್ಕಿರಿದು ಸೇರುತ್ತಾರೆ, ಲಕ್ಷ್ಮಿಯನ್ನು ಆರಾಧಿಸುತ್ತಾರೆ.

ಮಹಾರಾಷ್ಟ್ರದಲ್ಲಿನ ಕೊಲ್ಲಾಪುರ ಮಹಾಲಕ್ಷ್ಮೀ ಮತ್ತು ದಕ್ಷಿಣ ಮುಂಬೈಯ ಮಹಾಲಕ್ಷ್ಮೀ ದೇವಸ್ಥಾನಗಳು ದೇಶದ ಪ್ರಸಿದ್ಧ ಲಕ್ಷ್ಮಿ ಮಂದಿರಗಳು. ಆದರೆ ಈ ಎರಡೂ ಕಡೆ ಲಕ್ಷ್ಮೀಪೂಜೆಗೆ ಬ್ರಾಹ್ಮಣ ಅರ್ಚಕರೇ ಇದ್ದಾರೆ. ದಹಾಣೂವಿನಲ್ಲಷ್ಟೇ ದಲಿತ ಅರ್ಚಕರು.

ಉತ್ತರ ಮುಂಬಯಿಯಿಂದ ಹೈವೇಯಲ್ಲಿ ದಹಾಣೂ ಕಡೆ ಹೊರಟರೆ ರಸ್ತೆಯ ಎರಡೂ ಕಡೆ ಕಾಡು ಮತ್ತು ಬೆಟ್ಟಗಳು. ಕೊಲ್ಲಾಪುರದ ಮಹಾಲಕ್ಷ್ಮೀ ದೇವಿಯು ಗುಜರಾತ್ ಸಂಚಾರ ಮಾಡಿದ ಸಂದರ್ಭದಲ್ಲಿ ದಹಾಣೂವಿನ ಬೆಟ್ಟದ ಗುಹೆ ಸಮೀಪ ವಿಶ್ರಾಂತಿ ಪಡೆದಳೆನ್ನುವುದು ಪ್ರತೀತಿ. ಅನಂತರ ಊರ ಆದಿವಾಸಿ ಬುಡಕಟ್ಟು ಜನರು ಅಲ್ಲಿ ಮಹಾಲಕ್ಷ್ಮೀಯನ್ನು ಪೂಜಿಸತೊಡಗಿದರು. ಒಮ್ಮೆ ಉತ್ಸವದ ಸಂದರ್ಭದಲ್ಲಿ ಗರ್ಭಿಣಿ ಆದಿವಾಸಿ ಮಹಿಳೆಯೊಬ್ಬಳಿಗೆ ಬೆಟ್ಟದ ಮೇಲೇರಲು ಕಷ್ಟವಾಗಿ ಬಿದ್ದುಬಿಟ್ಟಳಂತೆ. ಆಗ ಮಹಾಲಕ್ಷ್ಮೀ ಆ ಭಕ್ತೆಗೆ, 'ನಾನೇ ಕೆಳಗಿಳಿದು ನಿನಗೆ ದರ್ಶನ ನೀಡುವೆ' ಎಂದಳಂತೆ. ಅದೇ ಇಲ್ಲಿನ ದೇವಸ್ಥಾನ ಎನ್ನುವ ಐತಿಹ್ಯವಿದೆ.

ಮಹಾಲಕ್ಷ್ಮೀ ದೇವಿ ಸ್ಥಳೀಯ ಬುಡಕಟ್ಟು ಜನಾಂಗದವರ ಕುಟುಂಬ ದೇವತೆಯೂ ಹೌದು. ದಹಾಣೂ ಮಹಾಲಕ್ಷ್ಮೀಯನ್ನು ಮಹಾರಾಷ್ಟ್ರದ ಕೊಂಕಣ ಪ್ರದೇಶದಿಂದ ಮೊದಲ್ಗೊಂಡು ದಕ್ಷಿಣ ಗುಜರಾತ್ ಪ್ರದೇಶದ ಅಸಂಖ್ಯಾತ ಭಕ್ತಜನರು ಜಾತಿಭೇದವಿಲ್ಲದೆ ಪೂಜಿಸುತ್ತಾರೆ. ಈ ಸ್ಥಳವು ಹಲವು ಶತಮಾನಗಳ ಧಾರ್ಮಿಕ ಇತಿಹಾಸವನ್ನು ಹೊಂದಿದೆ.

### ಲಕ್ಷ್ಮಿಯ ಎರಡು ಆವಾಸಗಳು!

ದಹಾಣೂ ಮಹಾಲಕ್ಷ್ಮೀ ದೇವಿಗೆ ಎರಡು ದೇವಸ್ಥಾನಗಳಿವೆ. ಒಂದು ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಚರೋಟಿ ನಾಕಾ ಹೈವೇ ಸಮೀಪದಲ್ಲಿದೆ. ಮತ್ತೊಂದು, ಮೂಲ ದೇವಸ್ಥಾನವು 3ರಿಂದ 4 ಕಿ.ಮೀ. ದೂರದಲ್ಲಿರುವ ಮಹಾಲಕ್ಷ್ಮೀ ಬೆಟ್ಟದ ಮೇಲೆ ನಿಂತಿದೆ. ಅದನ್ನು 'ಮಹಾಲಕ್ಷ್ಮೀ ಗಢ್' ಎಂದು ಕರೆಯುತ್ತಾರೆ. ನೆಲದಿಂದ ಸುಮಾರು 600 ಅಡಿ ಎತ್ತರದಲ್ಲಿರುವ ದೇಗುಲಕ್ಕೆ ಭಕ್ತರು ಬೆಟ್ಟ ಹತ್ತಿ ಹೋಗೋದು ಬಹಳ ಕಡಿಮೆ. ಹಾಗಾಗಿ ತಪ್ಪಲಲ್ಲಿರುವ ದೇವಸ್ಥಾನವೇ ಹೆಚ್ಚು ಪ್ರಸಿದ್ಧಿ.

ಪೂಜಾ ವಿಧಿಗಳನ್ನು–ಕಾರ್ಯಗಳನ್ನು ಸಾತ್ವಿ ಮತ್ತು ಬೋಳಡೆ ಕುಟುಂಬದವರು ನಿರ್ವಹಿಸುತ್ತಾರೆ. ಇದಕ್ಕಾಗಿ ಟ್ರಸ್ಟ್ ಇದೆ.

ಪ್ರತಿ ವರ್ಷ ದಹಾಣೂವಿನಲ್ಲಿ ಹನುಮ ಜಯಂತಿಯಿಂದ ಹದಿನೈದು ದಿನಗಳ ಕಾಲ 'ಮಹಾಲಕ್ಷ್ಮೀ ಯಾತ್ರೆ' (ಜಾತ್ರೆ) ಉತ್ಸವ ನಡೆಯುತ್ತದೆ. ಚೈತ್ರ ಪೂರ್ಣಿಮೆ ಹಬ್ಬದ ಅವಧಿಯಲ್ಲಿ, ಬುಡಕಟ್ಟು ಜನಾಂಗದವರು ತಮ್ಮ ಸಂಭ್ರಮಕ್ಕಾಗಿ 'ತಾರ್ಪ' ನೃತ್ಯವನ್ನು ಪ್ರದರ್ಶಿಸುತ್ತಾರೆ. ಇದು ದಹಾಣೂ ಪ್ರದೇಶದ ಅತಿ ದೊಡ್ಡ ಸಾಂಸ್ಕೃತಿಕ ಹಬ್ಬವೂ ಆಗಿದೆ. ನವರಾತ್ರಿಯಲ್ಲಂತೂ ದೇವಿಯ ದರ್ಶನಕ್ಕೆ ಗಂಟೆಗಟ್ಟಲೆ ಸಾಲಲ್ಲಿ ನಿಲ್ಲಬೇಕು. ಆಗ ಒಂದೂವರೆ ಲಕ್ಷಕ್ಕೂ ಹೆಚ್ಚು ಭಕ್ತರು ನೆರೆಯುತ್ತಾರೆ.

ಮಹಾರಾಷ್ಟ್ರ, ಗುಜರಾತ್, ದಮನ್ ಮತ್ತು ದಿಯು, ದಾದ್ರಾ ನಗರ ಹವೇಲಿಯ ಭಾಗಗಳಿಂದ ಸಾವಿರಾರು ಜನರು ಆಗಮಿಸಿ ದೇವಿಯ ಆಶೀರ್ವಾದ ಪಡೆಯುತ್ತಾರೆ. ಪೂಜೆಯ ಸಮಯದಲ್ಲಿ ಜವ್ಹರ್‌ನ ಮುಕ್ನೆ ರಾಜವಂಶದ ರಾಜನ ಧ್ವಜವನ್ನು ದೇವಸ್ಥಾನದಲ್ಲಿ ಹಾರಿಸಲಾಗುತ್ತದೆ. ಕ್ರಿ.ಶ. 1306ರಲ್ಲಿ ಜವ್ಹರ್